**ಸಾಕ್ಷಿಯನ್ನು ದಿನಾಂಕ: 05-12-2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು :- ವಾದಿ ಪರ ವಕೀಲರಿಂದಃ**

Mysore (Personal and Miscellaneous) Inam Abolition Act 1956, ಕಾಯ್ದೆ ಜಾರಿಗೆ ಬಂದ ನಂತರ ನನ್ನ ತಂದೆಯಾದ ದ್ಯಾವಣ್ಣ ದಾವಾ ಸರ್ವೆ ನಂ.68 ಮತ್ತು 71 ರ ಜಮೀನುಗಳನ್ನು ಮರುಮಂಜೂರಾತಿ ಮಾಡಲು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ, ಮರುಮಂಜೂರಾತಿ ಸಲುವಾಗಿ ಪ್ರಕರಣ ಸಂಖ್ಯೆಃ 42/1959-60 ರ ಪ್ರಕಾರ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನ ತಂದೆ ಹೇಳಿಕೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂ.68 ಮತ್ತು 71 ರ ಜಮೀನುಗಳನ್ನು ನಾನು ಮತ್ತು ಮೃತ ಜೆ.ಎಂ. ಕೃಷ್ಣಪ್ಪ 1957 ರಲ್ಲಿ ಜಂಟಿಯಾಗಿ ಖರೀದಿ ಮಾಡಿದ್ದೇವೆ ಎಂದು ನನ್ನ ತಂದೆ ಹೇಳಿಕೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೇಳಿಕೆ ಮೇರೆಗೆ ಪ್ರಕರಣವನ್ನು ಕುಲಂಕುಶವಾಗಿ ವಿಚಾರಣೆ ಮಾಡಿ ಭೂ-ನ್ಯಾಯಮಂಡಳಿಯು ದಿನಾಂಕಃ 09-03-1962 ರಂದು ದಾವಾ ಜಮೀನುಗಳನ್ನು ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪನವರ ಪರವಾಗಿ ಜಂಟಿಯಾಗಿ ಮರುಮಂಜೂರು ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಮರುಮಂಜೂರಾತಿ ನಂತರ ದಾವಾ ಜಮೀನುಗಳ ಖಾತೆ ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪನವರ ಹೆಸರಿಗೆ ಜಂಟಿಯಾಗಿ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪ ದಾವಾ ಜಮೀನುಗಳ ಜಂಟಿ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಕಂದಾಯವನ್ನು ಸಹ ಜಂಟಿಯಾಗಿ ಕಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

1983 ನೇ ಸಾಲಿನಲ್ಲಿ ಕೈ ತಪ್ಪಿನಿಂದ ಸರ್ವೆ ನಂ.68 ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯಲ್ಲಿ ಜೆ.ಎಂ.ಕೃಷ್ಣಪ್ಪರವರ ಹೆಸರು ಬಿಟ್ಟು ಹೋಗಿತ್ತು ಎಂದರೆ ನನಗೆ ಗೊತ್ತಿಲ್ಲ. ತಮ್ಮ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ಸೇರಿಸುವಂತೆ ಜೆ.ಎಂ.ಕೃಷ್ಣಪ್ಪನವರು 1986-87 ರಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಆಧಾರದ ಮೇರೆಗೆ ಆರ್.ಆರ್.ಟಿ.ಸಿ.ಆರ್. ನಂ.274/1987-88 ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾಖಲೆಗಳನ್ನು ಪರಿಶೀಲಿಸಿ ಪಹಣಿ ಪತ್ರಿಕೆಯಲ್ಲಿ ಜೆ.ಎಂ.ಕೃಷ್ಣಪ್ಪನವರ ಹೆಸರನ್ನು ಸೇರಿಸಲು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ನನ್ನ ತಂದೆ ಅಥವಾ ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ಆದೇಶದ ಬಗ್ಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2018 ನೇ ಸಾಲಿನ ಸರ್ವೆ ನಂ.68 ರ ಪಹಣಿ ಪತ್ರಿಕೆಯಲ್ಲಿ ಜೆ.ಎಂ.ಕೃಷ್ಣಪ್ಪನ ಹೆಸರನ್ನು ನನ್ನ ತಂದೆಯ ಹೆಸರಿನ ಜೊತೆ ಜಂಟಿಯಾಗಿ ದಾಖಲಾಗಿದೆ ಎಂದರೆ ಸರಿ. ಜೆ.ಎಂ.ಕೃಷ್ಣಪ್ಪನ ಹೆಸರನ್ನು ಪಹಣಿ ಪತ್ರಿಕೆಯಲ್ಲಿ ಸೇರಿಸಿದ್ದನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ.

ನಮ್ಮ ತಂದೆ 1992 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ತಂದೆ ಮರಣ ಹೊಂದಿದ ನಂತರ ಸದರಿ ಜೆ.ಎಂ.ಕೃಷ್ಣಪ್ಪ ಮರಣ ಹೊಂದಿದ್ದಾರೆ ಎಂದರೆ ಸರಿ. ನಮ್ಮ ತಂದೆ ಮರಣ ಹೊಂದಿದ ನಂತರ ನಾನು ಮತ್ತು ಜೆ.ಎಂ.ಕೃಷ್ಣಪ್ಪ ದಾವಾ ಜಮೀನುಗಳ ಜಂಟಿ ಸ್ವಾಧೀನದಲ್ಲಿ ಇದ್ದೆವು ಎಂದರೆ ಸರ್ವೆ ನಂ.71 ರಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದೆವು ಮತ್ತು ಸರ್ವೆ ನಂ.68 ರಲ್ಲಿ ನಾನೊಬ್ಬನೇ ಸ್ವಾಧೀನದಲ್ಲಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.68 ರ ಸ್ವಾಧೀನದಲ್ಲಿ ನಾನೊಬ್ಬನೇ ಇದ್ದೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಜೆ.ಎಂ.ಕೃಷ್ಣಪ್ಪ ಮರಣ ಹೊಂದಿದ ನಂತರ ನಾನು ಮತ್ತು ವಾದಿಗಳು ದಾವಾ ಜಮೀನುಗಳ ಜಂಟಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರ್ವೆ ನಂ.71 ರಲ್ಲಿ ಜಂಟಿಯಾಗಿ ಸ್ವಾಧೀನದಲ್ಲಿದ್ದೇವೆ ಮತ್ತು ಸರ್ವೆ ನಂ.68 ರಲ್ಲಿ ನಾನೊಬ್ಬನೇ ಸ್ವಾಧೀನದಲ್ಲಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.68 ರ ಸ್ವಾಧೀನದಲ್ಲಿ ನಾನೊಬ್ಬನೇ ಇದ್ದೇನೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆ ರೀತಿ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ.71 ಕ್ಕೆ ಸಂಬಂಧಿಸಿದಂತೆ ನಾನು ಜೆ.ಎಂ.ಕೃಷ್ಣಪ್ಪನ ಕೆಳಗಡೆ ಗೇಣಿದಾರನಾಗಿದ್ದೆ ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯ ಮೇರೆಗೆ ಎಲ್.ಆರ್.ಎಫ್. ನಂ.7(ಎ) 143/1999-2000 ರ ಪ್ರಕಾರ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಜೆ.ಎಂ.ಕೃಷ್ಣಪ್ಪ ಮರಣ ಹೊಂದಿದ ನಂತರ ಅವರ ವಾರಸುದಾರರಾದ ವಾದಿಗಳನ್ನು ಸದರಿ ಪ್ರಕರಣದಲ್ಲಿ ಕಡತದ ಮೇಲೆ ತಂದಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ್ದ ಗೇಣಿ ಅರ್ಜಿ ವಜಾ ಆಗಿದೆ ಎಂದರೆ ಸರಿ. ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸರ್ವೆ ನಂ.71 ರಲ್ಲಿ ನೀಲಗಿರಿ ಮರಗಳು ಇವೆ ಎಂದರೆ ಸರಿ. ನೀಲಗಿರಿ ಸಸಿಗಳನ್ನು ನಮ್ಮ ತಂದೆ ಮತ್ತು ಜೆ.ಎಂ.ಕೃಷ್ಣಪ್ಪ ಒಟ್ಟಾಗಿ ನೆಟ್ಟಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪ ಇಬ್ಬರೂ ಸೇರಿ ಹಲವಾರು ಬಾರಿ ನೀಲಗಿರಿ ಮರಗಳನ್ನು ಕತ್ತರಿಸಿ ಮಾರಾಟ ಮಾಡಿ ಹಣವನ್ನು ಸಮನಾಗಿ ಹಂಚಿಕೊಂಡಿದ್ದಾರೆ ಎಂದರೆ ಸರಿ. ಜೆ.ಎಂ.ಕೃಷ್ಣಪ್ಪ ಬದುಕಿದ್ದಾಗ ಎರಡು ದಾವಾ ಜಮೀನುಗಳಲ್ಲಿ ಆತ ಮತ್ತು ನನ್ನ ತಂದೆ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿ. ಜೆ.ಎಂ.ಕೃಷ್ಣಪ್ಪ ಮರಣ ಹೊಂದಿದ ನಂತರ ದಾವಾ ಜಮೀನುಗಳಲ್ಲಿ ಭಾಗ ನೀಡುವಂತೆ ವಾದಿಗಳು ನನ್ನನ್ನು ದಿನಾಂಕಃ 10-04-2014 ರಂದು ಕೇಳಿದ್ದಾರೆ ಎಂದರೆ ಕೇಳಿಲ್ಲ. ನಾನು ಭಾಗ ನೀಡುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ

ವಾದಿಯರಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂ.71 ರಲ್ಲಿ ಮಾತ್ರ ಇದೆ ಎಂದು ಹೇಳುತ್ತಾರೆ. ದಾವಾ ಸರ್ವೆ ನಂ.68 ರಲ್ಲೂ ಸಹ ವಾದಿಯರಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ವಾದಿಯರಿಗೆ ಸರ್ವೆ ನಂ.68 ರಲ್ಲಿ ಭಾಗ ನೀಡುವುದನ್ನು ತಪ್ಪಿ ಸುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ.68 ರ ಜಮೀನು ಅಂಜಿನಪ್ಪನವರಿಗೆ ಯಾವ ರೀತಿ ಬಂತು ಎನ್ನು ವುದು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂ.68 ರ ಮೇಲೆ ಅಂಜಿನಪ್ಪನವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅಂಜಿನಪ್ಪನಿಗೆ ದಾವಾ ಸರ್ವೆ ನಂ.68 ರ ಮೇಲೆ ಯಾವುದೇ ಹಕ್ಕಿಲ್ಲದೇ ಇದ್ದರೂ ಸಹ ಅದನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆ ಮತ್ತು ಅಂಜಿನಪ್ಪ ದಿನಾಂಕಃ 03-02-1965 ರಂದು ನಿಡಿ-2 ಕ್ರಯಪತ್ರವನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ ಅಂಜಿನಪ್ಪನವರ ಹೆಸರಿಗೆ ಪಹಣಿ ಪತ್ರಿಕೆ ದಾಖಲಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ರ ಪ್ರಕಾರ ನನ್ನ ತಂದೆಗೆ ಯಾವುದೇ ಹಕ್ಕು ಬಂದಿಲ್ಲ ಎಂದರೆ ಸರಿಯಲ್ಲ.

(ನ್ಯಾ ಯಾಲಯದ ಕಾಲಾವಕಾಶ ಮುಗಿದಿದ್ದರಿಂದ, ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು).

**(ಉಕ್ತಲೇಖನವನ್ನು ತೆರೆದ ನ್ಯಾ ಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾ ರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**